ಚಿಪ್ಪುಗಳು ಅಸ್ಥಿಪಂಜರಗಳೇ!

ಜೋನ ಬೆರ್ಗ ವ್ಹಿಕ್ಟರ್

ಜನರೆಲ್ಲ ತಮ್ಮ ಅಸ್ಥಿಪಂಜರವನ್ನು ಶರೀರದೊಳಗಿಟ್ಟು ಜೀವಿಸುತ್ತಾರೆ. ಆದರೆ ಕೆಲ ಅದ್ಭುತ ಜೀವಿಗಳು ತಮ್ಮ ಅಸ್ಥಿಪಂಜರವನ್ನು ಹೊರಗಿನಿಂದಲೇ ಧರಿಸುತ್ತವೆ. ನಿಮ್ಮ ಹೂದೋಟದಲ್ಲಿಯ ಗಿಡ ಬಳ್ಳಿಗಳ ಮೇಲೆ ಅಲೆದಾಡುವ ಚಿಕ್ಕ ಬಸವನ ಹುಳುಗಳು, ಸಮುದ್ರದ ತಳದಲ್ಲಿ ಜೀವಿಸುವ ಬೃಹತ್ತಾಕಾರದ ಸಿಂಪುಗಳು, **(giant oysters)** ಹಾಗು ಇದರಂತಹ ಮೃದ್ವಂಗಿ **(mollusc)** ಕುಟುಂಬಕ್ಕೆ ಸೇರಿದ ಎಷ್ಟೋ ಜೀವಿಗಳು ಚಿಪ್ಪುಗಳ ಒಳಗೆ ಅಡಗಿಕೊಂಡು ಜೀವಿಸುತ್ತಿರುತ್ತವೆ. ಅವು ಬೆಳೆದಂತೆ ಹೊರಗಿನ ಚಿಪ್ಪು ಕೂಡ ಬೆಳೆಯುತ್ತಿರುತ್ತದೆ.

ಅಂದವಾದ ಚಿತ್ರಗಳೊಂದಿಗೆ ಸುಲಭವಾಗಿ ಓದಲು ಸಾಧ್ಯ ಮಾಡಿದ ಜೋನ ವ್ವಿಕ್ಟರ್ ಇವಳ ಈ ಪುಸ್ತಿಕೆಯಲ್ಲಿ ಚಿಪ್ಪುಗಳ ತಯಾರಿಕೆ, ಅವುಗಳಲ್ಲಿ ಅಡಗಿರುವ ಮತ್ತು ಆಹಾರಕ್ಕಾಗಿ ಹೊರಬರುವ ಎಷ್ಟೋ ಜೀವಿಗಳ ಬಗ್ಗೆ ವರ್ಣನೆ ಇದೆ. ಇವಳ ಈ ಪುಸ್ತಿಕೆಯು ಚಿಪ್ಪುಗಳಲ್ಲಿರುವ ಅದ್ಭುತ ಜೀವಿಗಳ ಜಗತ್ತನ್ನು ನಿಮ್ಮ ಕಣ್ಮುಂದೆ ಕಟ್ಟುತ್ತದೆ.

ಚಿಪ್ಪುಗಳು ಅಸ್ಥಿಪಂಜರಗಳೇ!

ಜೋನ ಬೆರ್ಗ ವ್ಹಿಕ್ಟರ್

ಕನ್ನಡಕ್ಕೆ ಪ್ರಭಾಕರ ನಾನಾವಟಿ

ಚಿಪ್ಪುಗಳು ಅಸ್ಥಿಪಂಜರಗಳೇ!



purpura snail
ark clam (turkey wing)
file clam

ನಾವೆಲ್ಲರು ನಮ್ಮ ಅಸ್ಥಿಪಂಜರವನ್ನು ಶರೀರದೊಳಗಿಟ್ಟು ಜೀವಿಸುತ್ತೇವೆ. ನಮ್ಮ ಎಲುಬುಗಳನ್ನು ಯಾರೂ ನೋಡಲಾರರು. ಆದರೆ ಕೆಲ ಜೀವಿಗಳು ತಮ್ಮ ಅಸ್ಥಿಪಂಜರವನ್ನು ಉಡುಪಿನಂತೆ ಹೊರಗಿನಿಂದ ಧರಿಸುತ್ತವೆ. ಮೃದ್ವಂಗಿಗಳೆಲ್ಲ ಈ ರೀತಿಯಾಗಿ ಮಾಡುತ್ತವೆ. ಬಸವನ ಹುಳುಗಳು, ಕ್ಲಾಮ್‌ಗಳು, ಸಿಂಪಿಗಳು, ಸ್ಕಲ್ಲೊಪ್‌ಗಳು ಮತ್ತು ಇನ್ನೆಷ್ಟೋ ಜೀವಿಗಳು ಮೃದ್ವಂಗಿಯ ಜಾತಿಗೆ ಸೇರಿದ ಜೀವಿಗಳು. ಇವೆಲ್ಲ ಸಮುದ್ರ ಇಲ್ಲವೆ ಹೊಳೆಗಳ, ಕೆರೆಗಳ ತಳದಲ್ಲಿ ಇರುತ್ತವೆ. ಕೆಲ ಮೃದ್ವಂಗಿಗಳು ಭೂಪೃಷ್ಠದ ಮೇಲೆ ಕೂಡ ಜೀವಿಸುತ್ತವೆ.





ಮೃದ್ವಂಗಿಗಳ ಚಿಪ್ಪು ಒಳಗಿರುವ ಜೀವಿಯನ್ನು
ಇತರ ಪ್ರಾಣಿಗಳು ತಿನ್ನುವದರಿಂದ ರಕ್ಷಿಸುತ್ತದೆ.

ಮೇಲಂಗಿಯಂತಹ ತ್ವಚೆಯು ಮೃದ್ವಂಗಿಗಳ ಶರೀರದ ಬೆನ್ನಿನ ಮತ್ತು ಮಗ್ಗುಲಿನ ಭಾಗಗಳನ್ನು ಮುಚ್ಚಿಡುತ್ತದೆ. ಈ ಪದರಿಗೆ ನಿಲುವಂಗಿ ಎಂದು ಹೆಸರು .ಇದು ವಿಶಿಷ್ಟವಾದ ಜೀವಕೋಶಗಳಿಂದ ತಯಾರಾಗುತ್ತದೆ. ಈ ಜೀವಕೋಶಗಳಿಂದ ಸುಣ್ಣ, ಖನಿಜ ಪದಾರ್ಥಗಳು ಹೊರಬಿದ್ದು ಚಿಪ್ಪುಗಳ ಪದರುಗಳು ತಯಾರಾಗುತ್ತವೆ.



ಸುಣ್ಣದ ಎಷ್ಟೋ ಪದರುಗಳು ಇಲ್ಲಿ ಇರುತ್ತವೆ. ಕೆಲವು ಅಡ್ಡ-ತಿಡ್ಡ, ಕೆಲವು ಮೇಲೆ-ಕೆಳಗೆ ಇರಬಹುದು. ಕೆಲ ಪದರುಗಳು ಬಣ್ಣಬಣ್ಣದ್ದಾಗಿರಬಹುದು. ಜೀವಿಯು ಹೊರಗಿನ ನಿಲುವಂಗಿಯನ್ನು ಕಟ್ಟುವದನ್ನು ನಿಲ್ಲಿಸಿದ ನಂತರ ಒಳಗಿರುವ ಜೀವಿ ಇನ್ನುಂದೆ ಬೆಳೆಯಲಾರದು.

ಕೆನ್ಸೇರಳೆ ಬಸವನ ಹುಳು ಬೆಳೆಯುತ್ತಿರುವಾಗಿನ ಅಂಚಿನ ಸೂಕ್ಷ್ಮ ನೋಟ



ಕೆಲ ಮೃದ್ವಂಗಿಗಳು ಚಿಪ್ಪುಗಳ ಒಳಬದಿಯಲ್ಲಿ ಕೂಡ ಛಾವಣಿಯ ಮೇಲಿನ ತೆಳುವಾದ ಹಲಗೆಗಳಂತೆ ಒಂದರ ಮೇಲೊಂದು ಪದರುಗಳನ್ನು ಸೇರಿಸುತ್ತವೆ. ನೀವು ಚಿಪ್ಪುಗಳನ್ನು ಬಿಡಿಸಿದಾಗ ಒಳಗಿರುವ ನಯವಾದ, ಹೊಳೆಯುವ ಪದರುಗಳು ಕಾಣುತ್ತವೆ. ಪ್ರಕಾಶ ಕಿರಣಗಳು ಅವುಗಳ ಅಂಚಿನ ಮೇಲೆ ಬಿದ್ದಾಗ ಬಣ್ಣಗಳು ಬದಲಾಗುತ್ತಿರುವಂತೆ ಕಾಣುವವು. ಈ ಪದರುಗಳನ್ನು ‘ಮುತ್ತುಗಳ ತಾಯಿ’ ಎಂದು ಕರೆಯುವರು.



pearl oyster



ಕೆಲವೊಂದು ವೇಳೆ ಮುರಿದ ಬಿದ್ದ ಚಿಪ್ಪು ಇಲ್ಲವೆ ಉಸುಕಿನ ಕಣ ಚಿಪ್ಪಿನ ಒಳಗೆ ಹೋಗಬಹುದು. ಇದು ತಾಯಿ ಮುತ್ತಿನ ಪದರುಗಳಂತೆ ನಯವಾದ ಮತ್ತು ದುಂಡಗಿನ ಪದರುಗಳಿಂದ ಮುಚ್ಚಿರಬಹುದು. ಇದಕ್ಕೆನೇ ಸಾಕಷ್ಟು ಪದರುಗಳಿದ್ದಾಗ ಅದು ನಿಜವಾದ ಮುತ್ತಾಗುವದು. ಕೆಲವು ವೇಳೆ ನೀವು ಸಿಂಪಿಯಲ್ಲಿ ಮುತ್ತನ್ನು ಕಾಣಬಹುದು. ಕೆಲವು ಮುತ್ತುಗಳು ಸಮುದ್ರದ ತಳದಲ್ಲಿ ಆಳದಲ್ಲಿರುವ ದೈತ್ಯ ಸಿಂಪಿಗಳಲ್ಲಿ ಮುಳುಗುಗಾರರಿಗೆ ಸಿಗುತ್ತವೆ. ಸಮುದ್ರಗಳ ತಳಕ್ಕೆ ಹೋಗದೆ ಮುತ್ತುಗಳನ್ನು ಸಿಂಪಿ ತೋಟಗಳಲ್ಲಿ ಬೆಳೆಸಬಹುದು. ಎಲ್ಲಾ ಕ್ಲಾಮ್‌ಗಳು ಮತ್ತು ಬಸವನ ಹುಳುಗಳು ವಿವಿಧ ರೀತಿಯ ಮುತ್ತುಗಳನ್ನು ನಿರ್ಮಿಸಬಹುದು.


pearl


pearl

ಕೆಲವು ಮೃದ್ವಂಗಿಗಳಲ್ಲಿ ಮಂದವಾದ ಕಂದು ಬಣ್ಣದ ಒರಟಾದ ಹೊದಿಕೆಯು ಚಿಪ್ಪಿನ ಹೊರಭಾಗದಲ್ಲಿರುವ ಬಣ್ಣ ಮತ್ತು ಗುರುತುಗಳನ್ನು ಮರೆಮಾಡುತ್ತದೆ. ಮೃದ್ವಂಗಿ ಸತ್ತಾಗ, ಮರಳು ಮತ್ತು ನೀರು ಈ ಹೊರಗಿನ, ಚರ್ಮದಂತಹ ಹೊದಿಕೆಯನ್ನು ಸವೆಸುತ್ತವೆ.

ನಿಮಗೆ ಚಿಪ್ಪು ಸಿಕ್ಕಾಗ ಅದರ ತ್ವಚೆ ನಶಿಸಿ ಹೋಗಿರಲು ಸಾಕು.





ನಿಲುವಂಗಿಯಂತಿರುವ ಮೇಲಿನ ಹೊದಿಕೆಯು ಚಿಪ್ಪಿನ ಹೊರ ಅಂಚಿನಲ್ಲಿ ಹರಡುತ್ತದೆ. ಪ್ರಾಣಿ ಬೆಳೆದಂತೆ, ಹೊದಿಕೆಯ ಹೊರಭಾಗದಲ್ಲಿರುವ ಕೋಶಗಳು ಪದರುಗಳ ಅಂಚುಗಳಿಗೆ ಸುಣ್ಣವನ್ನು ಸೇರಿಸುತ್ತ ಹೋಗುತ್ತವೆ. ಚಿಪ್ಪು ದೊಡ್ಡದಾಗುತ್ತದೆ. ಚಿಪ್ಪು ಮುರಿದರೆ, ಹೊದಿಕೆಯು ಬಿರುಕುಗಳನ್ನು ಸುಣ್ಣದ ಹೆಚ್ಚುವರಿ ಪದರುಗಳಿಂದ ತುಂಬುತ್ತದೆ.

ಹೊಸ ಪ್ರಾಣಿಗಳು ಮೊಟ್ಟೆಯಲ್ಲಿರುವಾಗಲೇ ಚಿಪ್ಪುಗಳನ್ನು ಬೆಳೆಯಿಸಲು ಪ್ರಾರಂಭಿಸುತ್ತವೆ. ಬಹುತಾಂಶ ಮೃದ್ವಂಗಿಗಳಲ್ಲಿ ಈ ಆರಂಭದಲ್ಲಿಯ ಚಿಪ್ಪು ಉದುರಿ ಹೋಗುವದಿಲ್ಲ. ಮೃದ್ವಂಗಿ ಬೆಳೆದಂತೆ ಈ ಆರಂಭಿಕ ಚಿಪ್ಪುಗಳ ಮೇಲೆಯೇ ಪದರುಗಳು ಸೇರಿಸಲ್ಪಡುತ್ತವೆ.



ನೆಪ್ಚ್ಯೂನ್ ಬಸವನ ಹುಳಗಳ ಮೊಟ್ಟೆಯ ಕ್ಯಾಪ್ಸುಲ್‌ಗಳು

ಕೆಲವೊಮ್ಮೆ ನೀವು ಸಮುದ್ರದ ಬಸವನ ಹುಳು ಎಂದು ಕರೆಯಲ್ಪಡುವ ಮೃದ್ವಂಗಿಯ ಗುಂಪನ್ನು ಕಾಣಬಹುದು. ಈ ಮೊಟ್ಟೆಯ ಗುಂಪನ್ನು ನೀರಿಕ್ಷಿಸಿದರೆ, ಅಲ್ಲಿ ನೂರಾರು ಚಿಕ್ಕ ಬಸವನ ಹುಳುಗಳನ್ನು ನೋಡಬಹುದು. ಇವುಗಳ ಚಿಪ್ಪುಗಳು ಮರಳಿನ ಕಣಕ್ಕಿಂತ ದೊಡ್ಡದಾಗಿರಲಿಕ್ಕಿಲ್ಲ. ಪ್ರತಿಯೊಂದು ಬಸವನ ಹುಳು 8-10 ಇಂಚು ಉದ್ದ ಬೆಳೆಯಬಹುದು.

ಡೋವ್ಡ ಸ್ನೇಲ್ ಗಳು ಇರುವ ಜೆಲ್ಲಿ ಕ್ಯಾಪ್ಸುಲ್‌ಗಳಲ್ಲಿಯ ಪ್ರತಿ ಕ್ಯಾಪ್ಸುಲ್‌ನಲ್ಲಿ 10-12 ಕ್ಕಿಂತ ಹೆಚ್ಚು ಮೊಟ್ಟೆಗಳು ಇರಬಹುದು. ಈ ಕ್ಯಾಪ್ಸುಲ್‌ಗಳಿಂದ ಬಸವನ ಹುಳುಗಳು ಈಗಾಗಲೇ ಹೊರಬಂದಿದ್ದು ಕ್ಯಾಪ್ಸುಲ್ ಗಳು ಖಾಲಿ ಇವೆ.

ಚಿಪ್ಪುಗಳು ಸುಣ್ಣದಿಂದ ಮಾಡಲ್ಪಟ್ಟಿವೆ. ಸುಣ್ಣ ಇದು ಒಂದು ಖನಿಜ ಪದಾರ್ಥವು. ಇದರ ರಾಸಾಯನಿಕ ಹೆಸರು ಕ್ಯಾಲ್ಶಿಯಮ್ ಕಾರ್ಬೋನೇಟ. ನಿಮ್ಮ ಹಲ್ಲುಗಳು ಮತ್ತು ಎಲುಬುಗಳು ಇದೇ ಪದಾರ್ಥದಿಂದ ಮಾಡಲ್ಪಟ್ಟಿವೆ. ನೀವು ತಿನ್ನುತ್ತಿರುವ ಹಣ್ಣು ಮತ್ತು ಹಸಿರು ಪಲ್ಲೆಗಳಿಂದ ಇದು ನಿಮಗೆ ದೊರೆಯುವದು. ನೀವು ಕುಡಿಯುವ ಹಾಲಿನಿಂದ ಇದು ದೊರೆಯುವದು. ನೀರಿನಿಂದ ಕೂಡ ದೊರೆಯುವದು.



ಬಸವನ ಹುಳು, ಕ್ಲಾಮ್ ಮತ್ತು ಇತರ ಮೃದ್ವಂಗಿ ಜಾತಿಯ ಪ್ರಾಣಿಗಳು ಕ್ಯಾಲ್ಸಿಯಮ್ ಕಾರ್ಬೋನೇಟನ್ನು ಅವು ತಿನ್ನುತ್ತಿರುವ ಅನ್ನ ಪದಾರ್ಥಗಳಿಂದ ಪಡೆಯುವವು. ಅವು ಇರುತ್ತಿರುವ ನೀರಿನಿಂದ ಪಡೆಯುವವು. ನಿಮ್ಮ ಶರೀರವು ತನ್ನ ಒಳಗಿರುವ ಅಸ್ಥಿಪಂಜರಕ್ಕಾಗಿ ಕ್ಯಾಲ್ಸಿಯಮ್ ಕಾರ್ಬೋನೇಟನ್ನು ಉಪಯೋಗಿಸುವದು. ಬಸವನ ಹುಳು ಹೊರಗಿರುವ ತನ್ನ ಚಿಪ್ಪು ಇಲ್ಲವೆ ಅಸ್ಥಿಪಂಜರಕ್ಕಾಗಿ ಕ್ಯಾಲ್ಸಿಯಮ್ ಕಾರ್ಬೋನೇಟನ್ನು ಉಪಯೋಗಿಸುವದು.



ಕೆಲ ಮೃದ್ವಂಗಿಗಳು ಒಂದೇ ಚಿಪ್ಪನ್ನು ಹೊಂದಿರುತ್ತವೆ. ಅವುಗಳಿಗೆ ಯುನಿವಾಲ್ವ್ ಎಂದು ಕರೆಯುತ್ತಾರೆ. ಯುನಿ ಎಂದರೆ ಒಂದು. ಪೆರಿವಿಂಕಲ್, ಬಸವನ ಹುಳು ಮತ್ತು ಲಿಂಪೆಟ್ ಗಳು ಒಂದೇ ಚಿಪ್ಪಿನ ಪ್ರಾಣಿಗಳು.




olive
moon snail
keyhole limpet
tulip shell
flame auger
spiked limpet

ಬಸವನ ಹುಳು ಆಹಾರವನ್ನು ಸೇವಿಸುವಾಗ ತನ್ನ ಚಿಪ್ಪಿನಿಂದ ಅಲ್ಪ ಭಾಗವನ್ನು ಹೊರತರುತ್ತದೆ. ಅದರ ಪಾದವು ಕಲ್ಲು ಅಥವಾ ಕೊಂಬೆಗೆ ಹಿಡಿದಿಟ್ಟುಕೊಳ್ಳುತ್ತದೆ.



ಅದನ್ನು ತಿನ್ನಬಹುದಾದ ಏಡಿ ಬಂದರೆ ಹುಳು ಬೇಗನೆ ತಲೆ ಮತ್ತು ಪಾದವನ್ನು ಚಿಪ್ಪಿನೊಳಗೆ ಎಳೆಯುತ್ತದೆ. ಆ ಮೇಲೆ ಚಿಪ್ಪಿನ ತೆರೆದ ಭಾಗವನ್ನು ಮುಚ್ಚುತ್ತದೆ.

ಇನ್ನೊಂದು ಬಗೆಯ ಮೃದ್ವಂಗಿಗಳಿಗೆ ಎರಡು ಚಿಪ್ಪುಗಳನ್ನು ಒಟ್ಟಿಗೆ ಜೋಡಿಸಿಕೊಂಡಿರುತ್ತವೆ. ಇವುಗಳನ್ನು ಬಾಯವಾಲ್ವ ಎಂದು ಕರೆಯುತ್ತಾರೆ. ಸುಮಾರು ಹತ್ತು ಸಾವಿರ ವಿಧದ ಬಾಯವಾಲ್ವಗಳಿವೆ. ಕ್ಲಾಮಗಳು, ಸಿಂಪಿಗಳು, ಸ್ಕಲ್ಲೊಪ್ ಗಳು ಬಾಯವಾಲ್ವ ಪ್ರಾಣಿಗಳು.



Pacific thorny oyster

rough file clam

Atlantic thorny oyster

king venus

sunray venus


heart cockle
tellin
scallop

ನೀರಲ್ಲಿದ್ದಾಗ ಚಿಪ್ಪುಗಳ ತುಸು ಭಾಗವು ತೆರೆದಿರುತ್ತದೆ. ನೀರು ಚಿಪ್ಪಿನ ಮತ್ತು ಅದರಲ್ಲಿದ್ದ ಪ್ರಾಣಿಯ ಮುಖವನ್ನು ತೊಳೆಯುತ್ತದೆ. ನೀರು ತನ್ನ ಜತೆ ಸಸ್ಯ, ಚಿಕ್ಕ ಪ್ರಾಣಿ ಮತ್ತು ಖನಿಜ ಪದಾರ್ಥಗಳನ್ನು ಒಯ್ಯುತ್ತದೆ. ಬಾಯವಾಲ್ವಗಳಿಗೆ ಆಹಾರ ಮತ್ತು ಚಿಪ್ಪು ಮಾಡಲಿಕ್ಕೆ ಸುಣ್ಣವು ಈ ರೀತಿಯಲ್ಲಿ ದೊರೆಯುವದು.





ಅಪಾಯ ಬಂದಾಗ ಅವು ತಮ್ಮನ್ನು ಗಟ್ಟಿಯಾಗಿ ಮುಚ್ಚಿಕೊಳ್ಳುತ್ತವೆ

ಚಿಪ್ಪು ಪೂರ್ಣವಾಗಿ ಮುಚ್ಚಿದರೂ ಕೂಡ ಮೃದ್ವಂಗಿಗಳು ಸುರಕ್ಷಿತವಾಗಿರಲಾರರು. ಕ್ಲಾಮ ನೀರಲ್ಲಿದ್ದಾಗ ಕಡಲು ಕಾಗೆ (ಸಮುದ್ರ ಗಲ್) ಅದನ್ನು ಹಿಡಿಯಬಹುದು. ಮೇಲೆ ಹಾರಿ ಹೋಗಿ ಅದನ್ನು ಕಲ್ಲುಬಂಡೆಗಳ ಮೇಲೆ ತೂರಬಹುದು. ಚಿಪ್ಪು ಮುರಿದರೆ ಸಮುದ್ರ ಗಲ್ ಕ್ಕೆ ತಿನ್ನಲು ಕ್ಲಾಮ ದೊರೆಯಬಹುದು. ನಕ್ಷತ್ರ ಮೀನು ಅದನ್ನು ಹಿಡಿದಿಡಬಹುದು. ನಕ್ಷತ್ರ ಮೀನು ಅದನ್ನು ಅತ್ತ ಇತ್ತ ಜಗ್ಗುತ್ತ ಚಿಪ್ಪನ್ನು ಒಡೆಯಬಹುದು. ಆಮೇಲೆ ಅದರ ಒಳಗಿರುವ ಮೃದ್ವಂಗಿಯನ್ನು ತಿನ್ನಬಹುದು.



Littorina pulchra

Cerion casablancae

ಕೆಲ ಮೃದ್ವಾಂಗಗಳು ಬಹು ಚಿಕ್ಕದಾಗಿರುತ್ತವೆ. ಕೆಲವು ಮಾತ್ರ ದೊಡ್ಡ ಗಾತ್ರದ್ದು. ಕೆಲವು ನೀರಲ್ಲಿ ಮತ್ತು ಕೆಲವು ಭೂಪೃಷ್ಠದಲ್ಲಿ ವಾಸಿಸುತ್ತವೆ. ನಿಮ್ಮ ಹೂದೋಟದಲ್ಲಿಯ ಗಿಡಗಳ ಮೇಲೆ ಬಸವನ ಹುಳು ಇರಬಹುದು. ಅದು ಬೆಳೆದು ದೊಡ್ಡದಾಗಿರಬಹುದು. ಆದರೆ ಅದನ್ನು ನೀವು ನೊಡಲಾರಿರಿ.



Cepolis ovumreguli

Achatinella





Liquus



Cochlostyla

Englandina

Polymita

ಕ್ಲಾಮ್ ದ ಚಿಪ್ಪುಗಳು ಊಟದ ತಾಟಿನಕ್ಕಿಂತ ದೊಡ್ಡದಿರಬಹುದು. ದಕ್ಷಿಣ ಸಮುದ್ರದಲ್ಲಿಯ ಕ್ಲಾಮ್ ಗಳನ್ನು ಒಂದು ಕೈಯಿಂದ ಎತ್ತಲು ಆಗಲಾರವು. ಅವು ಮನುಷ್ಯರನ್ನು ಕೂಡ ಹಿಡಿದಿಡಬಹುದು. ಈಜುಗಾರರಿಗೆ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಅವು ಕೈಕಾಲುಗಳಿಗೆ ಅಂಟಿಕೊಂಡರೆ ಬಿಡಿಸಿ ಬರುವದು ಕಠಿಣವಾಗುತ್ತದೆ. ತಮ್ಮ ಚಿಪ್ಪುಗಳನ್ನು ಮುಚ್ಚಿಕೊಂಡರೆ ಅದರಿಂದ ಹೊರಬರುವದು ಬಹಳ ಕಠಿಣ.


giant clam
luted giant clam
lucine
jackknife clam
sunray venus
royal comb venus
carditas
surf clams
golden venus
gem

ಬಹುತಾಂಶ ಮೃದ್ವಂಗಿಗಳ ಆಯುಷ್ಯ ಬಹಳ ಕಡಿಮೆ. ಕೆಲ ಸ್ಕಲ್ಲೋಪಗಳು ಎರಡು ವರ್ಷ ಜೀವಿಸಬಹುದು. ಉಳಿದ ಮೃದ್ವಂಗಿಗಳು ಹೆಚ್ಚು ಕಾಲ ಜೀವಿಸಬಹುದು. ಕೆಲ ಸಿಂಪಿಗಳು ಹತ್ತು ವರುಷ ಜೀವಿಸಬಹುದು. ಮಸ್ಸೆಲ್ಸ ಗಳ ಆಯುಷ್ಯ 30 ವರುಷ.



rough scallop

lion's paw scallop



rough scallops

blue sea mussel



eastern oyster



Atlantic thorny oyster



ನೀವು ಸಮುದ್ರ ದಂಡೆಯ ಮೇಲಿದ್ದರೆ ವಿವಿಧ ಪ್ರಕಾರದ ಚಿಪ್ಪುಗಳನ್ನು ನೋಡಬಹುದು. ಉಳಿದ ನೀರಿನ ತಾಣಗಳಲ್ಲಿಯೂ ನೀವು ಅವುಗಳನ್ನು ಕಾಣಬಹುದು. ಕೆರೆಗಳ, ಸರೋವರಗಳ ಮತ್ತು ಹೊಳೆಗಳ ದಂಡೆಯ ಮೇಲೆ ನೀವು ಕಾಣಬಹುದು. ಮನೆ ಮುಂದಿನ ಮೀನುಗಳಿಗಾಗಿ ಇದ್ದ ಕೆರೆಗಳಲ್ಲಿ ಸಿಹಿನೀರಿನ ಹುಳುಗಳನ್ನು ನೋಡಬಹುದು. ಈ ಚಿಪ್ಪುಗಳು ಬೇರೆ ಬೇರೆ ಗಾತ್ರದ, ಬೇರೆ ಬೇರೆ ಆಕಾರದ, ಬೇರೆ ಬೇರೆ ಬಣ್ಣಗಳಲ್ಲಿ ದೊರೆಯುವವು. ಇವೆಲ್ಲರ ಅಸ್ಥಿಪಂಜರವು ಹೊರಗಿನಿಂದ ಧರಿಸಲ್ಪಟ್ಟಿದೆ.